**ದಿನಾಂಕ 5–5–2021 ರಂದು ಮಧ್ಯಾಹ್ನ 12.00 ಗಂಟೆಗೆ ಕುಲಪತಿಗಳ ಸಭಾಂಗಣ, ಕೃವಿವಿ., ರಾಯಚೂರಿನಲ್ಲಿ ವರ್ಚುವಲ್ ಮತ್ತು ಆಫ್‌ಲೈನ್‌ನಲ್ಲಿ ಜರುಗಿದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 48ನೇ ಸಭೆಯ ನಡವಳಿಗಳು:**

**ಉಪಸ್ಥಿತರು:**

| | | | |
|---|---|---|---|
| 1. | ಡಾ. ಕೆ.ಎನ್. ಕಟ್ಟಿಮನಿ, ಮಾನ್ಯ ಕುಲಪತಿಗಳು, ಕೃವಿವಿ., ರಾಯಚೂರು | ಅಧ್ಯಕ್ಷರು | ಭೌತಿಕ |
| 2. | ಶ್ರೀ ರಾಜೇಂದರ್ ಕುಮಾರ್ ಕಟಾರಿಯಾ ಭಾಆಸೇ., ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, | ಸದಸ್ಯರು | ವರ್ಚುವಲ್ |
| 3. | ಶ್ರೀಮತಿ ಪದ್ಮಾವತಿ, ಸರ್ಕಾರದ ವಿಶೇಷ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, (ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಪರವಾಗಿ) | ಸದಸ್ಯರು | ವರ್ಚುವಲ್ |
| 4. | ಶ್ರೀ ರಫೀ ಅಹ್ಮದ್, ಸರ್ಕಾರದ ಉಪ ಕಾರ್ಯದರ್ಶಿಗಳು, ಕೃಷಿ ಇಲಾಖೆ (ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಪರವಾಗಿ) | ಸದಸ್ಯರು | ವರ್ಚುವಲ್ |
| 5. | ಶ್ರೀ ಕೊಟ್ರಪ್ಪ ಬಿ. ಕೊರೇರ, ರಾಯಚೂರು | ಸದಸ್ಯರು | ಭೌತಿಕ |
| 6. | ಶ್ರೀ ತ್ರಿವಿಕ್ರಮ ಜೋಶಿ, ರಾಯಚೂರು | ಸದಸ್ಯರು | ಭೌತಿಕ |
| 7. | ಶ್ರೀ ಮಹಾಂತೇಶ್‌ಗೌಡ ಪಾಟೀಲ್, ಕೊಪ್ಪಳ | ಸದಸ್ಯರು | ವರ್ಚುವಲ್ |
| 8. | ಶ್ರೀ ಜಿ. ಶ್ರೀಧರ ಕೆಸರಹಟ್ಟಿ, ಗಂಗಾವತಿ | ಸದಸ್ಯರು | ವರ್ಚುವಲ್ |
| 9. | ಶ್ರೀ ಸುನಿಲ್, ರಾಯಚೂರು | ಸದಸ್ಯರು | ಭೌತಿಕ |
| 10. | ಡಾ. ಎಂ.ಜಿ. ಪಾಟೀಲ್, ಕುಲಸಚಿವರು, ಕೃವಿವಿ., ರಾಯಚೂರು | ಸದಸ್ಯ–ಕಾರ್ಯದರ್ಶಿ | ಭೌತಿಕ |

ಪ್ರಾರಂಭದಲ್ಲಿ, ಮಾನ್ಯ ಕುಲಪತಿಗಳು ಹಾಗೂ ಸಭಾಧ್ಯಕ್ಷರು ಕೋವಿಡ್–19 ಸಾಂಕ್ರಾಮಿಕ ರೋಗದ ನಿಯಂತ್ರಣಾ ಕ್ರಮವಾಗಿ 48ನೇ ಸಭೆಯನ್ನು ವರ್ಚುವಲ್ ಮತ್ತು ಆಫ್‌ಲೈನ್‌ನಲ್ಲಿ ನಡೆಸಲಾಗುತ್ತಿದೆ ಎಂದು ತಿಳಿಸುತ್ತಾ, ಹಾಜರಿದ್ದ ಎಲ್ಲಾ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳನ್ನು ಸ್ವಾಗತಿಸಿದರು.

ತದನಂತರ, ಕೊರಂ ಇದ್ದ ಪ್ರಯುಕ್ತ ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ–ಕಾರ್ಯದರ್ಶಿ ಇವರಿಗೆ ಕಾರ್ಯಸೂಚಿ ಪ್ರಕಾರ ಮಂಡಳಿಯ ಸಭೆಯನ್ನು ಪ್ರಾರಂಭಿಸಲು ಸಭಾಧ್ಯಕ್ಷರು ಸೂಚಿಸಿದರು. ಸಭೆಯಲ್ಲಿ ಈ ಕೆಳಗಿನಂತೆ ಕಾರ್ಯಸೂಚಿ ಮೇರೆಗೆ ವಿಷಯಗಳನ್ನು ಚರ್ಚಿಸಿ, ಠರಾಯಿಸಲಾಯಿತು:

| | |
|---|---|
| ಐಟಂ–1 | **ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 46ನೇ ಸಭೆಯ ಹಾಗೂ 47ನೇ (ತುರ್ತು ಸಭೆ) ಸಭೆಗಳ ನಡುವಳಿಗಳನ್ನು ಸ್ಥಿರೀಕರಿಸುವುದು.**<br>**ಠರಾವು:**<br>ದಿನಾಂಕ 8–1–2021 ಹಾಗೂ 10–2–2021 ರಂದು ಕ್ರಮವಾಗಿ ಜರುಗಿದ ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 46ನೇ ಸಭೆಯ ಹಾಗೂ 47ನೇ (ತುರ್ತು ಸಭೆ) ಸಭೆಗಳ ನಡುವಳಿಗಳನ್ನು ಸ್ಥಿರೀಕರಿಸಲಾಯಿತು.<br>**(ಕ್ರಮ : ಕುಲಸಚಿವರು)** |
| ಐಟಂ–2 | **ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 46ನೇ ಸಭೆಯ ಹಾಗೂ 47ನೇ (ತುರ್ತು ಸಭೆಗಳ ನಡುವಳಿಗಳ ಮೇಲೆ ತೆಗೆದುಕೊಳ್ಳಲಾದ ಅನುಪಾಲನಾ ಕ್ರಮಗಳಿಗೆ ಅನುಮೋದನೆ ನೀಡುವುದು.**<br>ಠರಾವು:<br>ದಿನಾಂಕ 8–1–2021 ಹಾಗೂ 10–2–2021 ರಂದು ಕ್ರಮವಾಗಿ ಜರುಗಿದ ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 46ನೇ ಸಭೆಯ ಹಾಗೂ 47ನೇ (ತುರ್ತು ಸಭೆ) ಸಭೆಗಳ ನಡವಳಿಗಳ ಮೇಲೆ ತೆಗೆದುಕೊಳ್ಳಲಾದ ಅನುಪಾಲನಾ ಕ್ರಮಗಳನ್ನು ಸ್ಥಿರೀಕರಿಸಲಾಯಿತು.<br>**(ಕ್ರಮ : ಕುಲಸಚಿವರು)** |

**ಐಟಂ–3** **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ 2020–21 ನೇ ಸಾಲಿನ ಪರಿಷ್ಕೃತ ಆಯವ್ಯಯ ಮತ್ತು 2021–22 ನೇ ಸಾಲಿನ ಅಂದಾಜು ಆಯವ್ಯಯಕ್ಕೆ ಅನುಮೋದನೆ ನೀಡುವ ಕುರಿತು.**

**ಠರಾವು:**

ವಿಸ್ತೃತ ಚರ್ಚೆಯ ನಂತರ, ಈ ಕೆಳಗೆ ಮಂಡಿಸಿದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ 2020–21ನೇ ಸಾಲಿನ ಪರಿಷ್ಕೃತ ಆಯವ್ಯಯ ಹಾಗೂ 2021–22ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಹಣಕಾಸು ಸಮಿತಿಯು ಶಿಫಾರಸ್ಸು ಮಾಡಿರುವುದನ್ನು ಕೃವಿವಿ ಅಧಿನಿಯಮದ ಕಲಂ 13(2)(i) ಹಾಗೂ 39(2) ಅಡಿಯಲ್ಲಿ ಉಪಬಂಧಿಸಿದಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು.

**I. ರಾಯಚೂರು ಕೃವಿವಿ ಯ 2020–21ನೇ ಸಾಲಿನ ಅಂದಾಜು ಆಯವ್ಯಯ ಮತ್ತು ಪರಿಷ್ಕೃತ ಆಯವ್ಯಯ:**

| ಕ್ರ.ಸಂ | ವಿವರಗಳು | 2020–21 ನೇ ಸಾಲಿನ ಅಂದಾಜು ಆಯವ್ಯಯ | 2020–21 ನೇ ಸಾಲಿನ ಪರಿಷ್ಕೃತ ಆಯವ್ಯಯ |
|---|---|---|---|
| **I** | **ಕೃಷಿ ಸಂಶೋಧನೆ** | | |
| 1 | ಆಡಳಿತ ಕಛೇರಿಗಳು | 27,33,46,700.00 | 37,32,90,318.00 |
| 2 | ಕೃಷಿ ಮಹಾವಿದ್ಯಾಲಯಗಳು | 24,74,77,500.00 | 30,51,37,520.00 |
| 3 | ಕೃಷಿ ಸಂಶೋಧನಾ ಕೇಂದ್ರಗಳು | 20,91,40,300.00 | 20,98,13,800.00 |
| 4 | ಕೃಷಿ ವಿಸ್ತರಣಾ ಘಟಕಗಳು | 3,12,35,500.00 | 4,27,88,000.00 |
| | **ಮೊತ್ತ** | **76,12,00,000.00** | **93,10,29,638.00** |
| **II** | **ಸಾಮಾನ್ಯ** | | |
| 1 | ಕೃಷಿ ಸಂಶೋಧನೆ (ಸಾಮಾನ್ಯ) | 5,81,00,000.00 | 9,35,84,688.00 |
| 2 | ಪರಿಶಿಷ್ಟ ಜಾತಿ ಉಪಯೋಜನೆ (SCP) (ಕೃಷಿ ಸಂಶೋಧನೆ) | 74,00,000.00 | 74,00,000.00 |
| 3 | ಗಿರಿಜನ ಉಪಯೋಜನೆ (TSP) (ಕೃಷಿ ಸಂಶೋಧನೆ) | 45,00,000.00 | 45,00,000.00 |
| 4 | ಕೃಷಿ ಶಿಕ್ಷಣ (ಸಾಮಾನ್ಯ) | 9,44,00,000.00 | 18,61,63,913.00 |
| | **ಮೊತ್ತ** | **16,44,00,000.00** | **28,56,98,601.00** |
| **III** | **ಇತರೆ ಯೋಜನೆಗಳು (GOK)** | | |
| 1 | ಪರಿಶಿಷ್ಟ ಜಾತಿ ಉಪಯೋಜನೆ (SCP) (ಕೃಷಿ ಶಿಕ್ಷಣ) | 4,92,40,012.00 | 3,80,58,676.00 |
| 2 | ಗಿರಿಜನ ಉಪಯೋಜನೆ (TSP) (ಕೃಷಿ ಶಿಕ್ಷಣ) | 3,55,51,035.00 | 2,89,99,535.00 |
| 3 | ಭೂ–ಸ್ವಾಧೀನ (Land Acquisition) | 6,92,78,634.00 | 6,92,78,634.00 |
| 4 | RIDF–20 (ನಬಾರ್ಡ) | 34,35,696.00 | 0.00 |
| 5 | ಪರಿಶಿಷ್ಟ ಜಾತಿ/ಪಂಗಡ (ವಸತಿ ನಿಲಯ ನಿರ್ಮಾಣ) | 0.00 | 0.00 |
| 6 | ರಾಷ್ಟ್ರೀಯ ಕೃಷಿ ವಿಕಾಸ್ ಯೋಜನೆ (RKVY) | 11,28,00,000.00 | 23,32,37,812.00 |
| | **ಮೊತ್ತ** | **27,03,05,377.00** | **36,95,74,657.00** |
| **IV** | **ಖಾಯಂ ಯೋಜನೆಗಳು ಮತ್ತು ಕೆ.ವಿ.ಕೆ** | | |
| 1 | ಎ.ಐ.ಸಿಆರ್.ಪಿ. ಯೋಜನೆಗಳು | 5,00,00,000.00 | 14,12,05,687.00 |
| 2 | ಕೃಷಿ ವಿಜ್ಞಾನ ಕೇಂದ್ರಗಳು | 10,00,00,000.00 | 14,92,15,615.00 |
| 3 | ಅಭಿವೃದ್ಧಿ ಅನುದಾನ (ICAR-SAU) | 5,00,00,000.00 | 1,68,00,330.00 |
| | **ಮೊತ್ತ** | **20,00,00,000.00** | **30,72,21,632.00** |
| **V** | **ಆಡ್ಹಾಕ್ ಯೋಜನೆಗಳು** | | |
| 1 | ಆಡ್ಹಾಕ್ ಯೋಜನೆಗಳು | 30,00,00,000.00 | 31,90,97961.00 |
| | **ಮೊತ್ತ** | **30,00,00,000.00** | **31,90,97,961.00** |
| **VI** | **ಇತರೆ** | | |
| 1 | ಸುಜಾಲಾ III ಯೋಜನೆ | 4,20,00,000.00 | 89,70,853.00 |
| 2 | ಡಿ.ಎಸ್.ಟಿ. ಯೋಜನೆ | 0.00 | 0.00 |
| 3 | ಇ.ಎಫ್.ಟಿ.ಎಲ್. ಯೋಜನೆ | 21,40,502.00 | 21,40,502.00 |

| | | | |
|---|---|---|---|
| 4 | ಎನ್. ಆರ್. ಐ. ಅನುದಾನ | 6,00,00,000.00 | 5,42,95,500.00 |
| 5 | ಆವರ್ತ ನಿಧಿ ಯೋಜನೆಗಳು | 0.00 | 36,93,24,229.00 |
| 6 | ಡಿ.ಇ.ಬಿ.ಟಿ. ಮತ್ತು ರಹಸ್ಯ ಖಾತೆ (Suspense Account) | 0.00 | 2,20,79,25,348.00 |
| | **ಮೊತ್ತ** | **10,41,40,502.00** | **2,64,26,56,432.00** |
| | **ಒಟ್ಟು ಮೊತ್ತ** | **1,80,00,45,879.00** | **4,85,52,78,921.00** |

## II. ರಾಯಚೂರು ಕೃಷಿ ವಿಶ್ವವಿದ್ಯಾಲಯದ 2021–22 ನೇ ಸಾಲಿನ ಅಂದಾಜು ಆಯವ್ಯಯ:

| ಕ್ರ.ಸಂ | ವಿವರಗಳು | 2021–22 ನೇ ಸಾಲಿನ ಅಂದಾಜು ಆಯವ್ಯಯ |
|---|---|---|
| **I** | **ಕೃಷಿ ಸಂಶೋಧನೆ** | |
| 1 | ಆಡಳಿತ ಕಛೇರಿಗಳು | 28,09,39,000.00 |
| 2 | ಕೃಷಿ ಮಹಾವಿದ್ಯಾಲಯಗಳು | 32,70,08,000.00 |
| 3 | ಕೃಷಿ ಸಂಶೋಧನಾ ಕೇಂದ್ರಗಳು | 22,48,21,000.00 |
| 4 | ಕೃಷಿ ವಿಸ್ತರಣಾ ಘಟಕಗಳು | 4,52,93,000.00 |
| | **ಮೊತ್ತ** | **87,80,61,000.00** |
| **II** | **ಸಾಮಾನ್ಯ** | |
| 1 | ಕೃಷಿ ಸಂಶೋಧನೆ (ಸಾಮಾನ್ಯ) | 1,76,29,000.00 |
| 2 | ಪರಿಶಿಷ್ಟ ಜಾತಿ ಉಪಯೋಜನೆ (SCP) (ಕೃಷಿ ಸಂಶೋಧನೆ) | 43,76,275.00 |
| 3 | ಗಿರಿಜನ ಉಪಯೋಜನೆ (TSP) (ಕೃಷಿ ಸಂಶೋಧನೆ) | 29,69,848.00 |
| 4 | ಕೃಷಿ ಶಿಕ್ಷಣ (ಸಾಮಾನ್ಯ) | 8,21,10,000.00 |
| | **ಮೊತ್ತ** | **10,70,85,123.00** |
| **III** | **ಇತರೆ ಯೋಜನೆಗಳು (GOK)** | |
| 1 | ಪರಿಶಿಷ್ಟ ಜಾತಿ ಉಪಯೋಜನೆ (SCP) (ಕೃಷಿ ಶಿಕ್ಷಣ) | 2,92,77,402.00 |
| 2 | ಗಿರಿಜನ ಉಪಯೋಜನೆ (TSP) (ಕೃಷಿ ಶಿಕ್ಷಣ) | 2,60,81,127.00 |
| 3 | ಭೂ–ಸ್ವಾಧೀನ (Land Acquisition) | 6,92,78,634.00 |
| 4 | RIDF–20 (ನಬಾರ್ಡ) | 0.00 |
| 5 | ಪರಿಶಿಷ್ಟ ಜಾತಿ/ಪಂಗಡ (ವಸತಿ ನಿಲಯ ನಿರ್ಮಾಣ) | 0.00 |
| 6 | ರಾಷ್ಟ್ರೀಯ ಕೃಷಿ ವಿಕಾಸ್ ಯೋಜನೆ (RKVY) | 15,55,00,000.00 |
| | **ಮೊತ್ತ** | **28,01,37,163.00** |
| **IV** | **ಖಾಯಂ ಯೋಜನೆಗಳು ಮತ್ತು ಕೆ.ವಿ.ಕೆ** | |
| 1 | ಎ.ಐ.ಸಿಆರ್.ಪಿ. ಯೋಜನೆಗಳು | 10,00,00,000.00 |
| 2 | ಕೃಷಿ ವಿಜ್ಞಾನ ಕೇಂದ್ರಗಳು | 10,00,00,000.00 |
| 3 | ಅಭಿವೃದ್ಧಿ ಅನುದಾನ (ICAR-SAU) | 5,00,00,000.00 |
| | **ಮೊತ್ತ** | **25,00,00,000.00** |
| **V** | **ಆಡ್ಹಾಕ್ ಯೋಜನೆಗಳು** | |
| 1 | ಆಡ್ಹಾಕ್ ಯೋಜನೆಗಳು | 30,00,00,000.00 |
| | **ಮೊತ್ತ** | **30,00,00,000.00** |
| **VI** | **ಇತರೆ** | |
| 1 | ಸುಜಾಲಾ III ಯೋಜನೆ | 90,00,000.00 |
| 2 | ಡಿ.ಎಸ್.ಟಿ. ಯೋಜನೆ | 0.00 |
| 3 | ಇ.ಎಫ್.ಟಿ.ಎಲ್. ಯೋಜನೆ | 21,40,502.00 |
| 4 | ಎನ್. ಆರ್. ಐ. ಅನುದಾನ | 6,00,00,000.00 |
| 5 | ಆವರ್ತ ನಿಧಿ ಯೋಜನೆಗಳು | 0.00 |

| | | |
|---|---|---|
| 6 | ಡಿ.ಇ.ಬಿ.ಟಿ. ಮತ್ತು ರಹಸ್ಯ ಖಾತೆ (Suspense Account) | 0.00 |
| | **ಮೊತ್ತ** | **7,11,40,502.00** |
| | **ಒಟ್ಟು ಮೊತ್ತ** | **1,88,64,23,788.00** |

**(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು)**

**ಐಟಂ–4** **ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಹೊಸ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡುವ ಕುರಿತು.**

**ಠರಾವು:**

ರೂ. 10.00 ಲಕ್ಷ ಅಧಿಕದ ಈ ಕೆಳಕಂಡ ಹೊಸ ಸಿವಿಲ್ ಕಾಮಾಗಾರಿಗಳನ್ನು ವಿಶ್ವವಿದ್ಯಾಲಯದ ಅಭಿವೃದ್ಧಿ ದೃಷ್ಟಿಯ ಹಿನ್ನೆಲೆಯಲ್ಲಿ ಕೃವಿವಿ., ರಾಯಚೂರಿನ ಮುಖ್ಯ ಆವರಣ ಮತ್ತು ಕೃಸಂ.ಕೇಂದ್ರ, ಗಂಗಾವತಿ ಆವರಣದಲ್ಲಿ ಕೆ.ಟಿ.ಪಿ.ಪಿ. ನಿಯಮಾನುಸಾರವಾಗಿ ಕೈಗೊಳ್ಳಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು:

| ಕ್ರಮ. ಸಂ. | ಸಿವಿಲ್ ಕಾಮಗಾರಿಯ ವಿವರ | ಅಂದಾಜು ಬೆಲೆ (ರೂ.) ಲಕ್ಷಗಳಲ್ಲಿ | ಅನುದಾನ ವಿವರ |
|---|---|---|---|
| **I** | **ಕೃವಿ.ವಿ.ವಿ. ರಾಯಚೂರಿನ ಮುಖ್ಯ ಆವರಣ** | | |
| 1 | ಕೃಷಿ ತಾಂತ್ರಿಕ ಮಹಾವಿದ್ಯಾಲಯ ರಾಯಚೂರಲ್ಲಿ ರೋಬೋಟಿಕ್ಸ್ ಮತ್ತು ಮೆಕಾಟ್ರಾನಿಕ್ಸ್ ಪ್ರಯೋಗಾಲಯ ನಿರ್ಮಿಸುವ ಕೆಲಸ. | 162.00 | 130.00 ಆರ್.ಕೆ.ವಿ.ವಾಯ್<br>32.00 ಕೃವಿವಿ ಅನುದಾನ |
| 2 | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು ಆಡಳಿತ ಭವನದಿಂದ SWE ಪ್ರಯೋಗಾಲಯದ ಸರ್ಕಲ್ ಮತ್ತು ನ್ಯಾನೋ ತಂತ್ರಜ್ಞಾನ ಕೇಂದ್ರದವರೆಗೆ ರಸ್ತೆಯನ್ನು ನಿರ್ಮಿಸುವ ಕೆಲಸ. | 42.00 | ಕೃ.ವಿ.ವಿ. ಅನುದಾನ |
| 3 | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು ಆವರಣದಲ್ಲಿರುವ ಹೊಸ ಸ್ನಾತಕೋತ್ತರ ವಸತಿ ನಿಲಯ ಮತ್ತು ಪ್ರಕೃತಿ, ವರುಣಾ ವಸತಿ ನಿಲಯದ ಮುಂದೆ ಡಾಂಬರ್ ರಸ್ತೆಯನ್ನು ನಿರ್ಮಿಸುವ ಕೆಲಸ. | 15.80 | ಕೃ.ವಿ.ವಿ. ಅನುದಾನ |
| 4 | ಕೃಷಿ ಮಹಾವಿದ್ಯಾಲಯ ರಾಯಚೂರು ಮುಂದಿನ ಭಾಗಕ್ಕೆ (ಮೊದಲನೆ ಮಹಡಿ ಮತ್ತು ಎರಡನೇ ಮಹಡಿ) ಅಲ್ಯುಮಿನಿಯಂ ಕಿಟಕಿಗಳನ್ನು ಅಳವಡಿಸುವ ಕೆಲಸ. | 18.20 | ಕೃ.ವಿ.ವಿ. ಅನುದಾನ |
| 5 | ಕೃಷಿ ಮಹಾವಿದ್ಯಾಲಯ ರಾಯಚೂರು ಆವರಣದಲ್ಲಿ ಪೂರ್ವ ಭಾಗ ಮತ್ತು ಹಿಂದಿನ ಭಾಗದಲ್ಲಿ WBM ರೋಡನ್ನು ನಿರ್ಮಿಸುವ ಕೆಲಸ. | 13.26 | ಕೃ.ವಿ.ವಿ. ಅನುದಾನ |
| 6 | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಬೀಜ ಘಟಕ ಮತ್ತು ಶೆಂಗಾಬೀಜದ ಸಿಪ್ಪೆ ಸುಲಿಯುವ ಯಂತ್ರದ ಸುತ್ತ ಶೆಡ್ ನಿರ್ಮಿಸುವ ಕೆಲಸ. | 32.22 | ಸ್ವಭೀಜಾಬಿವೃದ್ಧಿ ಅನುದಾನ |
| 7 | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಮುಖ್ಯ ಆವರಣದ ಬೀಜಘಟಕದ ಹಿಂದುಗಡೆ ಮಳೆನೀರು ಸಂಗ್ರಹಣಾ ಹೊಂಡವನ್ನು ನಿರ್ಮಿಸುವ ಕೆಲಸ. | 33.00 | ಕೃ.ವಿ.ವಿ. ಅನುದಾನ |
| 8 | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು ಆವರಣದ ಕೃಷಿ ಮಹಾವಿದ್ಯಾಲಯದ (ಮುಂದಿನ ಎಣ್ಣೆ ಬೀಜ ಘಟಕದ ಹತ್ತಿರವಿರುವ) ಕೃಷಿ ಹೊಂಡದ ಧಾರಣಾ ಸಾಮರ್ಥ್ಯವನ್ನು ವೃದ್ಧಿಸುವ ಕಾಮಗಾರಿ ಕೆಲಸ. | 20.00 | ಕೃ.ವಿ.ವಿ. ಅನುದಾನ |
| **II** | **ಕೃಷಿ ಸಂಶೋಧನಾ ಕೇಂದ್ರ ಗಂಗಾವತಿ.** | | |
| 9 | ಕೃಷಿ ಸಂಶೋಧನಾ ಕೇಂದ್ರ ಗಂಗಾವತಿಯಲ್ಲಿ ಕೃಷಿ ಸಂಶೋಧನಾ ಸಂಕೀರ್ಣದ ಮೇಲೆ ಮೊದಲನೇ ಮಹಡಿ ನಿರ್ಮಿಸುವ ಕೆಲಸ. | 300.00 | ಕೃವಿ.ವಿ.ವಿ. ಅನುದಾನ |
| **III** | **ಕೃಷಿ ಸಂಶೋಧನಾ ಕೇಂದ್ರ, ಹಗರಿ.** | | |
| 10 | ಕೃಷಿ ಸಂಶೋಧನಾ ಕೇಂದ್ರ ಹಗರಿಯಲ್ಲಿ ಡೀಪ್ಲೋಮಾ ಕಾಲೇಜ ಕಟ್ಟಡದ ಮುಂದೆ ಮುಖ್ಯ ರಸ್ತೆ ಮತ್ತು ರಸ್ತೆ ಪಕ್ಕದ ಚರಂಡಿ ನಿರ್ಮಿಸುವ ಕೆಲಸ. | 84.57 | ಕೃವಿ.ವಿ.ವಿ. ಅನುದಾನ |
| **IV** | **ಕೃಷಿ ಸಂಶೋಧನಾ ಕೇಂದ್ರ ಜಾನವಾಡ, ಬೀದರ** | | |
| 11 | ಕೃಷಿ ಸಂಶೋಧನಾ ಕೇಂದ್ರ ಜಾನವಾಡ, ಬೀದರಿನಲ್ಲಿ ಆವರಣದ ರಸ್ತೆಗಳನ್ನು ಮೇಲ್ದರ್ಜಗೇರಿಸುವ ಕೆಲಸ. | 38.00 | ಕೃವಿವಿ, ಅನುದಾನ |

**(ಕ್ರಮ : ಆಸ್ತಿ ಅಧಿಕಾರಿ)**

**ಐಟಂ–5 ಹತ್ತು ಲಕ್ಷ ರೂಪಾಯಿಗಳ ಮೌಲ್ಯವನ್ನು ಮೀರಿದ ಪ್ರತಿ ಉಪಕರಣದ ಖರೀದಿಗೆ ಅನುಮೋದನೆ ನೀಡುವ ಕುರಿತು.**

**ಠರಾವು:**

ವಿಸ್ತೃತ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ರೂ. 10.00 ಲಕ್ಷ ಮೌಲ್ಯವನ್ನು ಮೀರಿದ ಈ ಕೆಳಕಂಡ ಪ್ರಯೋಗಾಲಯದ ಪ್ರತಿ ಉಪಕರಣಗಳನ್ನು ಕೆ.ಟಿ.ಪಿ.ಪಿ. ನಿಯಮಾನುಸಾರವಾಗಿ ಖರೀದಿಸುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು:

| Sl. No. | Name of the Equipment | Name of the Department/ Project | Qty | Approximate Cost (Rs. Lakhs) | Budget |
|---|---|---|---|---|---|
| 1. | Four wheeler vehicle suitable for Agriculture College Gangavathi. | Special Officer, Agriculture College Gangavathi. | 1 | 12.00 | UAS, Grants |
| 2. | Bus for Agriculture College Gangavathi. | Agriculture College Gangavathi. | 1 | 35.00 | UAS, Grants |
| 3. | Vacuum Dryer | Dept. of Processing and Food Engineering, CAE, Raichur. | 1 | 15.00 | UAS, Grants |
| 4. | LC-MS/MS | Dept. of Pesticide Residue and Food Quality Analysis Lab, UAS, Raichur. | 1 | 200.00 | RKVY new project |
| 5. | HPLC | Food Microbiology Laboratory, UAS, Raichur. | 1 | 25.00 | RKVY new project |

**(ಕ್ರಮ : ಸರಕು ಖರೀದಿ ಅಧಿಕಾರಿ)**

**ಐಟಂ–6 ಶಿಕ್ಷಕ / ಶಿಕ್ಷಕೇತರ ಸಿಬ್ಬಂದಿಗಳನ್ನು ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಧಾರವಾಡ ಕೃವಿವಿ.,ಗೆ ವಾಪಸಾತಿ ಸೌಲಭ್ಯ (Repatriation) ಅಡಿಯಲ್ಲಿ ವರ್ಗಾವಣೆ ಮಾಡಿರುವ ಕ್ರಮಕ್ಕೆ ಸ್ಥಿರೀಕರಿಸುವ ಕುರಿತು.**

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕಾಯ್ದೆ 2009 ರ ಅಧಿನಿಯಮ ಕಲಂ 9 (ಸಿ) ಅನ್ವಯ ಕೃವಿವಿ., ರಾಯಚೂರಿನ ಶಿಕ್ಷಕ / ಶಿಕ್ಷಕೇತರ ಸಿಬ್ಬಂದಿಗಳನ್ನು (ಅನುಬಂಧದಲ್ಲಿ ಕಾಣಿಸಿದಂತೆ) ಕೃಷಿ ವಿಶ್ವವಿದ್ಯಾಲಯ, ಧಾರವಾಡಕ್ಕೆ ವಿಶೇಷ ಪ್ರಕರಣವೆಂದು ಮಾನ್ಯ ಕೃಷಿ ಸಚಿವರ ಅನುಮೋದನೆಯೊಂದಿಗೆ ತಕ್ಷಣದಿಂದ ಜಾರಿಗೆ ಬರುವಂತೆ ವರ್ಗಾಹಿಸಲು ಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರು ವಿಶ್ವವಿದ್ಯಾಲಯಕ್ಕೆ ಸೂಚಿಸಿರುವುದರಿಂದ ಸದರಿ ಶಿಕ್ಷಕ / ಶಿಕ್ಷಕೇತರ ಸಿಬ್ಬಂದಿಗಳನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿರುತ್ತದೆ ಎಂದು ಕುಲಸಚಿವರು, ಕೃವಿವಿ., ರಾಯಚೂರು ಸಭೆಯ ಗಮನಕ್ಕೆ ತರಲಾಯಿತು.

**ಠರಾವು:**

ಚರ್ಚೆಯ ನಂತರ, ಶಿಕ್ಷಕ / ಶಿಕ್ಷಕೇತರ ಸಿಬ್ಬಂದಿಗಳನ್ನು ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಧಾರವಾಡ ಕೃವಿವಿ.,ಗೆ ವಾಪಸಾತಿ ಸೌಲಭ್ಯ (Repatriation) ಅಡಿಯಲ್ಲಿ ಜೇಷ್ಠತೆಯ ಆಧಾರದ ಮೇಲೆ ವರ್ಗಾವಣೆ ಮಾಡಿಲ್ಲದಿಲ್ಲವೆಂದು ನಾಮನಿರ್ದೇಶಿತ ಮಾನ್ಯ ಸದಸ್ಯರು ಆಕ್ಷೇಪಿಸಿರುವುದರಿಂದ ಸದರಿ ವಿಷಯವನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸ್ಥಿರೀಕರಿಸಿರುವುದಿಲ್ಲ.

**(ಕ್ರಮ : ಕುಲಸಚಿವರು)**

**ಐಟಂ–7** **ರೂ. 2.00 ಲಕ್ಷಗಳವರೆಗಿನ ವೈದ್ಯಕೀಯ ವೆಚ್ಚ ಮರುಪಾವತಿಯ ಬಿಲ್ಲುಗಳನ್ನು ಮಂಜೂರು ಮಾಡುವ ಅಧಿಕಾರವನ್ನು ಕುಲಪತಿಯವರಿಗೆ ನೀಡುವ ಕುರಿತು.**

**ಠರಾವು:**

ಚರ್ಚೆಯ ನಂತರ, ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 31 ಎಸ್‌ಎಂಆರ್ 2014 ದಿನಾಂಕ 5–11–2014 ರಲ್ಲಿ ಇಲಾಖಾ ಮುಖ್ಯಸ್ಥರುಗಳಿಗೆ ರೂ. 2.00 ಲಕ್ಷಗಳವರೆಗಿನ ವೈದ್ಯಕೀಯ ವೆಚ್ಚ ಮರುಪಾವತಿಯ ಬಿಲ್ಲುಗಳನ್ನು ಮಂಜೂರು ಮಾಡುವ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿರುವುದರಿಂದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ರೂ. 2.00 ಲಕ್ಷಗಳವರೆಗಿನ ವೈದ್ಯಕೀಯ ವೆಚ್ಚ ಮರುಪಾವತಿಯ ಬಿಲ್ಲುಗಳನ್ನು ಮಂಜೂರು ಮಾಡುವ ಅಧಿಕಾರವನ್ನು ಕುಲಪತಿಯವರಿಗೆ ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಣಯಿಸಲಾಯಿತು.

**(ಕ್ರಮ : ಆಡಳಿತಾಧಿಕಾರಿಗಳು)**

**ಐಟಂ–8** **ಕೃವಿವಿ., ಸಿಬ್ಬಂದಿಯವರ ರೂ. 1,00,000/– ಕ್ಕಿಂತ ಹೆಚ್ಚಿನ ಮೊತ್ತದ ವೈದ್ಯಕೀಯ ವೆಚ್ಚದ ಬಿಲ್ಲುಗಳ ಮರುಪಾವತಿಗೆ ಅನುಮೋದನೆ ನೀಡುವ ಕುರಿತು.**

**ಠರಾವು:**

ದೀರ್ಘ ಚರ್ಚೆಯ ನಂತರ, ಸದರಿ ಪ್ರಸ್ತಾವನೆಯನ್ನು ಮುಂದಿನ ಸಭೆಯಲ್ಲಿ ಮಂಡಿಸಲು ನಿರ್ಣಯಿಸಲಾಯಿತು. ಮುಂದುವರೆದು, ಸಿಬ್ಬಂದಿಗಳ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಪರಿಶೀಲನೆಗಾಗಿ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ / ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಬೆಂಗಳೂರು ಇವರುಗಳಿಗೆ ಕಳುಹಿಸುವುದಕ್ಕಿಂತ ಮುಂಚಿತವಾಗಿ ಕುಲಪತಿಗಳು, ಕೃವಿವಿ., ರಾಯಚೂರು ಇವರ ಅನುಮೋದನೆಗೆ ಸಲ್ಲಿಸಲು ಮಂಡಳಿಯು ಸೂಚಿಸಿತು.

**(ಕ್ರಮ : ಆಡಳಿತಾಧಿಕಾರಿಗಳು)**

**ಐಟಂ–9** **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಸಿಬ್ಬಂದಿಯವರಿಗೆ ವೈದ್ಯಕೀಯ ವೆಚ್ಚವನ್ನು ಹಿಂತಿರುಗಿ ಪಡೆಯಲು ಶ್ರೀ ಶಿವಂ ಆಸ್ಪತ್ರೆ, ರಾಯಚೂರಿಗೆ ಮಾನ್ಯತೆ ಕೊಡುವ ಕುರಿತು.**

**ಠರಾವು:**

ದೀರ್ಘ ಚರ್ಚೆಯ ನಂತರ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಸಿಬ್ಬಂದಿಯವರುಗಳು ವೈದ್ಯಕೀಯ ಸೌಲಭ್ಯಗಳನ್ನು ಪಡೆಯಲು ಅನುಕೂಲವಾಗಲು ರಾಯಚೂರಿನ ಶ್ರೀ ಶಿವಂ ಆಸ್ಪತ್ರೆ ಗೆ ನಿಯಮಾವಳಿಗಳನ್ವಯ ಮಾನ್ಯತೆ ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು.

**(ಕ್ರಮ : ಆಡಳಿತಾಧಿಕಾರಿಗಳು)**

**ಐಟಂ–10** **ಕೃವಿವಿ, ರಾಯಚೂರಿನ ವಿವಿಧ ಕೇಂದ್ರಗಳಿಂದ ಬೀಜ ಘಟಕ, ಕೃವಿವಿ, ರಾಯಚೂರಿಗೆ ಮಾರಾಟ ಉದ್ದೇಶಕ್ಕಾಗಿ 2011–12 ರಿಂದ 2019–20 ನೇ ಸಾಲಿನವರೆಗೆ ಬೀಜ ಖರೀದಿಯ ಹಾಗೂ ಬೀಜ ಸಂಸ್ಕರಣಾ ಶುಲ್ಕದ ಪಾವತಿ ಮಾಡಲು ವಿಳಂಬ ಮನ್ನಾ ಹಾಗೂ ಹಣಕಾಸು ಮಂಜೂರಾತಿಗಾಗಿ ಅನುಮೋದನೆ ನೀಡುವ ಕುರಿತು.**

**ಠರಾವು:**

ಚರ್ಚೆಯ ನಂತರ, 2011–12 ರಿಂದ 2019–20 ನೇ ಸಾಲಿನವರೆಗೆ ಬೀಜಗಳ ಖರೀದಿ ಹಾಗೂ ಸಂಸ್ಕರಣೆ ಶುಲ್ಕಗಳ ಮೊತ್ತಗಳನ್ನು ಸಂಬಂಧಪಟ್ಟ ಕೇಂದ್ರಗಳಿಗೆ ಕೆಳಕಂಡ ಪಟ್ಟಿಯಲ್ಲಿ ತೋರಿಸಿದಂತೆ ಪಾವತಿಸಲು / ವರ್ಗಾಯಿಸಲು ವಿಶ್ವವಿದ್ಯಾಲಯದ ವಿಳಂಬ ಮನ್ನಾ ಆದೇಶ ಹಾಗೂ ಹಣಕಾಸು ಮಂಜೂರಾತಿ ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು :

| ಕ್ರ.ಸಂ | ಹಣಕಾಸಿನ ಮೂಲ | ಲೆಕ್ಕ ಶೀರ್ಷಿಕೆ ಸಂಖ್ಯೆ | ಪಾವತಿಸಬೇಕಾದ ಕೇಂದ್ರದ ಹೆಸರು | ಹಣ ಸಂದಾಯ ಮಾಡಬೇಕಾದ ಬಟವಾಡೆ ಅಧಿಕಾರಿ | ಮೊತ್ತ (ರೂ.ಗಳಲ್ಲಿ) |
|---|---|---|---|---|---|
| 1. | ಬೀಜ ಆವರ್ತನಿಧಿ, ಬೀಜ ಘಟಕ, ಕೃವಿವಿ, ರಾಯಚೂರು | 8637 | ಕೃಷಿ ವಿಜ್ಞಾನ ಕೇಂದ್ರ, ರಾಯಚೂರು | ಹಿರಿಯ ವಿಜ್ಞಾನಿ & ಮುಖ್ಯಸ್ಥರು, ಕೃವಿ.ಕೇಂದ್ರ, ರಾಯಚೂರು | 57,475 |
| 2. | | | | | 15,250 |

| | | | | | | |
|---|---|---|---|---|---|---|
| | 3. | | | ಕೃಷಿ ಸಂಶೋಧನಾ ಕೇಂದ್ರ, ಭೀಮರಾಯನಗುಡಿ | ಕ್ಷೇತ್ರ ಅಧಿಕ್ಷಕರು, ಕೃ.ಸಂ.ಕೇಂದ್ರ, ಭೀ.ಗುಡಿ | 5,71,700 |
| | 4. | | | ಕೃಷಿ ಸಂಶೋಧನಾ ಕೇಂದ್ರ, ಧಡೇಸಗೂರು | ಕ್ಷೇತ್ರ ಅಧಿಕ್ಷಕರು, ಕೃ.ಸಂ.ಕೇಂದ್ರ, ಧಡೇಸಗೂರು | 16,750 |
| | 5. | | | ಕೃಷಿ ಸಂಶೋಧನಾ ಕೇಂದ್ರ, ಚಿತ್ತಾಪುರ | ಕ್ಷೇತ್ರ ಅಧಿಕ್ಷಕರು, ಕೃ.ಸಂ.ಕೇಂದ್ರ, ಚಿತ್ತಾಪುರ | 1,07,136 |
| | 6. | | | ಕೃಷಿ ಸಂಶೋಧನಾ ಕೇಂದ್ರ, ಗಂಗಾವತಿ | ಕ್ಷೇತ್ರ ಅಧಿಕ್ಷಕರು, ಕೃ.ಸಂ.ಕೇಂದ್ರ, ಗಂಗಾವತಿ | 18,940 |
| | 7. | ಬೀಜ ಆವರ್ತನಿಧಿ, ಬೀಜ ಘಟಕ, ಕೃವಿವಿ, ರಾಯಚೂರು | 8637 | ಕೃಷಿ ಸಂಶೋಧನಾ ಕೇಂದ್ರ, ಬೀದರ | ಕ್ಷೇತ್ರ ಅಧಿಕ್ಷಕರು, ಕೃ.ಸಂ.ಕೇಂದ್ರ, ಬೀದರ | 2,53,660 |
| | | ಬೀಜ ಕೇಂದ್ರ ಯೋಜನೆ (ಸೋಯಾ ಅವರೆ), ಬೀಜ ಘಟಕ, ಕೃವಿವಿ, ರಾಯಚೂರು | 8635 | | | 1,09,980 |
| | 8. | ಬೀಜ ಆವರ್ತನಿಧಿ, ಬೀಜ ಘಟಕ, ಕೃವಿವಿ, ರಾಯಚೂರು | 8637 | ವಲಯ ಕೃಷಿ ಸಂಶೋಧನಾ ಕೇಂದ್ರ, ಕಲಬುರ್ಗಿ | ಕ್ಷೇತ್ರ ಅಧಿಕ್ಷಕರು, ವಲಯ ಕೃ.ಸಂ.ಕೇಂದ್ರ, ಕಲಬುರ್ಗಿ | 2,33,817 |
| | 9. | ಬೀಜ ಆವರ್ತನಿಧಿ, ಬೀಜ ಘಟಕ, ಕೃವಿವಿ, ರಾಯಚೂರು | 8637 | ಮುಖ್ಯ ಕೃಷಿ ಸಂಶೋಧನಾ ಕೇಂದ್ರ, ರಾಯಚೂರು | ಹಿರಿಯ ಕ್ಷೇತ್ರ ಅಧಿಕ್ಷಕರು, ಮು.ಕೃ.ಸಂ., ಕೇಂದ್ರ, ರಾಯಚೂರು | 60,100 |
| | | | | | **ಒಟ್ಟು ಮೊತ್ತ** | **14,44,838** |

**(ಕ್ರಮ : ವಿಶೇಷಾಧಿಕಾರಿಗಳು (ಬೀಜ))**

**ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು**

1 **ಕೃವಿವಿ ರಾಯಚೂರಿನಲ್ಲಿ ಹೈ-ಟೆಕ್ ವೆಬಿನಾರ್ ಸ್ಟುಡಿಯೊ-ಕಮ್-ಸ್ಕಿಲ್ ಲ್ಯಾಬ್‌ಅನ್ನು ಸ್ಥಾಪಿಸುವ ಕುರಿತು.**

ಹೈ-ಟೆಕ್ ವೆಬಿನಾರ್ ಸ್ಟುಡಿಯೊ-ಕಮ್-ಸ್ಕಿಲ್ ಲ್ಯಾಬ್‌ಅನ್ನು ಸ್ಥಾಪಿಸಲು ಅನುದಾನಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಸರ್ಕಾರವು ಪತ್ರ ಸಂಖ್ಯೆ AGRI-AUR/29/2020 ಸದಿನಾಂಕ 7-12-2020 ರಲ್ಲಿ ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯನ್ನು ಪಡೆಯಲು ಸೂಚಿಸಿರುತ್ತದೆ ಎಂದು ಕುಲಸಚಿವರು ಸಭೆಯ ಗಮನಕ್ಕೆ ತರಲಾಯಿತು.

**ಠರಾವು:**

ಚರ್ಚೆಯ ನಂತರ, ಸರ್ಕಾರದಿಂದ ಅನುದಾನ ಸ್ವೀಕರಿಸಿದ ನಂತರ ಹೈ-ಟೆಕ್ ವೆಬಿನಾರ್ ಸ್ಟುಡಿಯೊ-ಕಮ್-ಸ್ಕಿಲ್ ಲ್ಯಾಬ್‌ಅನ್ನು ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಣಯಿಸಲಾಯಿತು.

**(ಕ್ರಮ : ಕುಲಸಚಿವರು/ ಸರಕು ಖರೀದಿ ಅಧಿಕಾರಿ)**

ಸಭೆಯ ಅಧ್ಯಕ್ಷರಿಗೆ ಹಾಗೂ ಗೌರವಾನ್ವಿತ ಸದಸ್ಯರುಗಳಿಗೆ ಕುಲಸಚಿವರು ವಂದನೆ ಸಲ್ಲಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

| ಸಹಿ /- 21-5-2021<br>**(ಕೆ.ಎನ್. ಕಟ್ಟಿಮನಿ)**<br>ಕುಲಪತಿಗಳು ಹಾಗೂ ಅಧ್ಯಕ್ಷರು<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | ಸಹಿ /- 21-5-2021<br>**(ಎಂ.ಜಿ. ಪಾಟೀಲ)**<br>ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |
|---|---|

**(ಎಂ.ಜಿ. ಪಾಟೀಲ)**

ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ

ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.